Sri H. SIDDAVEERAPPA (Harihar).—Sir, according to the Hon. Deputy Minister, a very huge sum of Rs. 23 crores and odd has been invested, for which interest charges, godown charges, transport charges and various other things will have to be paid. I would like to know what will be the total burden on the cultivator? In other words, what would be the extra amount that he has to bear on account of these charges ?

Sri D. B. PAWAR.—Sir, I have already placed that information on the Table of the House ; the Hon. Member can have a look at it.

Request for release of arrested M.Ps. and other persons at Bangalore.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ತಾವು ಹಾಗೂ ಅನೇಕ ಮಾನ್ಯ ಸದಸ್ಯರು ಈ ಸಭೆಯಲ್ಲಿ ಒಂದು ತಿಳಿ ವಾತಾವರಣ ಮೂಡುವ ವಿಷಯ ಗಳನ್ನು ಮಾತನಾಡಿದ್ದಾರೆ. ಮತ್ತು ನಿನ್ನೆ ದಿವಸ ಈ ಧರಣಿ ಮುಷ್ಕರದ ಸಂಬಂಧದಲ್ಲಿ ವಿಧಾನ ಸೌಧದ ಹೊರಗಡೆ ಪ್ರದರ್ಶನ ನಡೆಸಿದಂತಹ ಕೆಲವು ಮಂದಿ ಪಿ.ಎಸ್.ಪಿ. ಪಾರ್ಟಿಯವರು ಕನ್ನಡ ಚಳುವಳಿಗಾರರು ಮತ್ತು ಕೆಲವರನ್ನು ದಸ್ತಗಿರಿ ಮಾಡಿದ್ದಾರೆ. ಮತ್ತು ಸರ್ಕಾರದವರು ಅವರ ಮೇಲೆ ಕೆಲವು ಕೇಸುಗಳನ್ನು ಹಾಕಿದ್ದಾರೆ. ಈಗ ನಮ್ಮ ಮಾನ್ಯ ಪಾರ್ಲಮೆಂಟರಿ ಶಾಖೆಯ ಸಚಿವರೂ ಇದ್ದಾರೆ. ಅವರಲ್ಲಿಯೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಹಾಗೂ ಮಾನ್ಯ ಅಧ್ಯಕ್ಷರಲ್ಲಿಯೂ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಈ ಸಂಬಂಧದಲ್ಲಿ ಯಾರು ಯಾರನ್ನು ನಿನ್ನೆ ದಿವಸ ದಸ್ತಗಿರಿ ಮಾಡಿದ್ದಾರೆ, ಅವರನ್ನು ಬಿಡುಗಡೆ ಮಾಡಬೇಕು. ಮತ್ತು ಅವರಮೇಲೆ ಹಾಕಿರತಕ್ಕ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು.

Sri D. B. KALMANKAR (Aland).—Sir, yesterday's movement was a political movement. I request the Government to take immediate action so that they may also be released.

Mr. SPEAKER.—Let us take up the next item on the Agenda.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಿನ್ನೆಯ ದಿವಸ ಈ ಧರಣಿ ಮುಷ್ಕರಕ್ಕೆ ಸಂಬಂಧ ಪಟ್ಟಹಾಗೆ ಯಾರು ಯಾರನ್ನು ದಸ್ತಗಿರಿ ಮಾಡಿದ್ದಾರೆಯೋ ಅವರೆಲ್ಲರನ್ನೂ ಬಿಡುಗಡೆ ಮಾಡಬೇಕು ಮತ್ತು ಪೋಲೀಸಿನವರು ಅವರಮೇಲೆ ಹಾಕಿರತಕ್ಕ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳುವಂತೆ ತಾವು ಹೇಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

Mr. SPEAKER.—I have called the next item.

Budget Estimates for 1969-70—Demands for grants
Demand No. 20 (31) Agriculture

Sri B. RACHAIAH (Minister for Agriculture).—Sir, on the recommendation of the Governor, I beg to move :

> "That a sum not exceeding Rs. 11,24,39,000 be granted to the Government to defray the charges which will come in course of payment during the financial year for the period ending 31st day of March 1970, in respect of Agriculture".